# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | | |
|---|---|---|---|
| ಹೆಸರು | : | ಸಂಗಪ್ಪ ಗಂಜಿಹಾಳ | ಫ್ರಾಸಾ-2 |
| ತಂದೆಯ ಹೆಸರು | : | ವಿಠ್ಠಲ | ಚಾಸಾ-3 |
| ವರ್ಷ | : | 40 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಜಡ್ರಾಮಕುಂಟೆ | |

ದಿಃ 30.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಈಗ ಅಂದಾಜು ಮೂರು ವರ್ಷಗಳ ಹಿಂದೆ ನಾನು ಮತ್ತು ಚಾಸಾ-4 ರವರು ವೈಯಕ್ತಿಕ ಕೆಲಸದ ಮೇಲೆ ಬೆಳಿಗ್ಗೆ 9 ಗಂಟೆಗೆ ಬೆಣ್ಣೂರ ಗ್ರಾಮಕ್ಕೆ ಹೋಗಿದ್ದೆವು. ಆ ಸಮಯಕ್ಕೆ ಪೊಲೀಸರು ಬೆಣ್ಣೂರ ಗ್ರಾಮಕ್ಕೆ ಬಂದಿದ್ದು, ನನ್ನನ್ನು ಮತ್ತು ಚಾಸಾ-4 ರವರಿಗೆ ಪಂಚನಾಮೆಗೆ ಸಹಕರಿಸಲು ಕೋರಿದ್ದು, ಅದಕ್ಕೆ ನಾವು ಒಪ್ಪಿಕೊಂಡಿರುತ್ತೇವೆ. ನಂತರ ಪೊಲೀಸರು ನಮ್ಮನ್ನು ಆರೋಪಿತರ ಮನೆ ಬಳಿ ಕರೆದುಕೊಂಡು ಹೋಗಿ, ಚಾಸಾ-14/ಮುತ್ತಪ್ಪ ರವರು ಆರೋಪಿತರ ಮನೆ ಮುಂದೆ ಇರುವ ರಸ್ತೆ ತೋರಿಸಿ ಇದೇ ಸ್ಥಳದಲ್ಲಿ ಆರೋಪಿತರು ಯಮನಪ್ಪನಿಗೆ ಹಲ್ಲೆ ಮಾಡಿದ ಸ್ಥಳ ಎಂದು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಪೊಲೀಸರು ನಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ, ಸ್ಥಳದಲ್ಲಿ ಬಿದ್ದಿದ್ದ ಕೊಡಲಿ ಕಾವು, ಕಲ್ಲು ಮತ್ತು ಟಾರ್ ರಸ್ತೆ ಮೇಲೆ ಇದ್ದ ರಕ್ತ ಮಿಶ್ರಿತ ಗಡ್ಡೆ ಪಿಕಾಸಿಯಿಂದ ಅಗೆದು ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿ ಸದರಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಿಪಿ-4 ಪಂಚನಾಮೆ ಕಾಲಕ್ಕೆ ಜಪ್ತಿ ಪಡಿಸಿಕೊಂಡ ಕೊಡಲಿ ಕಾವು, ಕಲ್ಲು ಮತ್ತು ಟಾರ್ ರಸ್ತೆಯ ರಕ್ತ ಮಿಶ್ರಿತ ಗಡ್ಡೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಮು ಮಾಲು-3 ರಿಂದ 5 ಎಂದು ಗುರುತಿಸಲಾಯಿತು. ನಿಪಿ-4 ಪಂಚನಾಮೆ ಕಾಲಕ್ಕೆ ತೆಗೆದ 5 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-5 ಎಂದು ಗುರುತಿಸಲಾಯಿತು.

2. ಅದೇ ದಿನ ಸಂಜೆ 4 ಗಂಟೆಗೆ ನನ್ನನ್ನು ಮತ್ತು ಚಾಸಾ-4 ರವರನ್ನು ಠಾಣೆಗೆ ಬರಮಾಡಿಕೊಂಡು, ಠಾಣೆಯಲ್ಲಿ ಚಾಸಾ-1 ರವರು ಹಾಜರುಪಡಿಸಿದ ರಕ್ತ ಕಲೆಯಾದ ಶರ್ಟನ್ನು ಹಾಜರುಪಡಿಸಿದ್ದು, ಅದನ್ನು ನನ್ನ ಮತ್ತು ಚಾಸಾ-4 ರವರ ಸಮಕ್ಷಮ ಪಂಚನಾಮೆ ಜರುಗಿಸಿ, ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿ ಸದರಿ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-6 ಎಂದು, ಸಾಕ್ಷಿ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಜಪ್ತಿ ಪಡಿಸಿಕೊಂಡ ಶರ್ಟನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು ಮಾಲು-1 ಎಂದು ಗುರುತಿಸಲಾಗಿದೆ.

3. ಇದಾದ ಮರುದಿನ ಯಮನಪ್ಪ ಮೃತಪಟ್ಟಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ಮತ್ತು ಚಾಸಾ-5 ರವರ ಸಮಕ್ಷಮ ಶವ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಶವ ಪಂಚನಾಮೆ ಕಾಲಕ್ಕೆ ಯಮನಪ್ಪನ ತಲೆ ಮೇಲೆ ಆದ ಗಾಯಗಳಿಗೆ ಹೊಲಿಗೆ ಹಾಕಿರುವುದನ್ನು ಗಮನಿಸಿರುತ್ತೇವೆ. ಸಾಕ್ಷಿ ಶವ ಪಂಚನಾಮೆ ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ನಿಪಿ-7 ಪಂಚನಾಮೆ ಕಾಲಕ್ಕೆ ತೆಗೆದ 4 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ-8 ಎಂದು ಗುರುಸಲಾಯಿತು.

**ಪಾಟೀ ಸವಾಲುಃ ಶ್ರೀ. ವಿ ಎಸ್ ಎಂ ವಕೀಲರಿಂದ** ಆರೋಪಿತರ ಪರ

ನಾನು 5 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಪಿ-4 ಪಂಚನಾಮೆಗೆ ಬರಬೇಕು ಎಂದು ಪೊಲೀಸರು ನನಗೆ ತಿಳಿಸಿರುತ್ತಾರೆ. ಸದರಿ ಪೊಲೀಸರ ಹೆಸರು ನನಗೆ ಗೊತ್ತಿಲ್ಲ. ಚಾಸಾ-1/ಸಂಗಮ್ಮ ಸಂಬಂಧಿಕರು ಎಂದರೆ ಸರಿಯಲ್ಲ. ಮು ಮಾಲು-3/ಕೊಡಲಿ ಕಾವು ಮತ್ತು ಮು ಮಾಲು-4/ಕಲ್ಲಿನ ಮೇಲೆ ಪಂಚನಾಮೆ ಕಾಲಕ್ಕೆ ರಕ್ತದ ಕಲೆ ಇದ್ದವೊ ಇಲ್ಲವೊ ಎಂದು ನಾನು ಗಮನಿಸಿರುವುದಿಲ್ಲ. ಕಲ್ಲು ಮತ್ತು ಕೊಡಲಿ ಕಾವನ್ನು ಪೊಲೀಸರು ಆರೋಪಿತರ ಮನೆಯ ಮುಂಭಾಗದಲ್ಲಿ ತೆಗೆದುಕೊಂಡಿರುತ್ತಾರೆ.

2. ನಿಪಿ-4 ಪಂಚನಾಮೆ ಮಾಡಲಾಗಿದೆ ಎಂದು ಹೇಳುವ ಸ್ಥಳವು ಸಾರ್ವಜನಿಕ ರಸ್ತೆ ಆಗಿದ್ದು, ಊರಿನ ಜನ ಓಡಾಡುತ್ತಾರೆ ಎಂದರೆ ಸರಿ. ಪಂಚನಾಮೆ ಬರೆಯಲು ನಾನು ಪೊಲೀಸರಿಗೆ ಮಾಹಿತಿ ಕೊಟ್ಟಿರುವುದಿಲ್ಲ. ನಿಪಿ-4 ಮತ್ತು ನಿಪಿ-6 ಪಂಚನಾಮೆಗಳಲ್ಲಿ ಬರೆದಿರುವ ವಿಚಾರಗಳು

ನನಗೆ ಗೊತ್ತಿಲ್ಲ. ಚಾಸಾ-1 ನನ್ನ ಸಂಬಂಧಿಕಳಾಗಿರುವುದರಿಂದ ಆಕೆಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ನಿಪಿ-4 ಮತ್ತು 6 ರಂತೆ ಯಾವುದೆ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ. 15/2022**

| | | | |
|---|---|---|---|
| ಹೆಸರು | : | ಸಂಗಮ್ಮ ಉದ್ದಣ್ಣವರ | ಫ್ರಾಸಾ-1 |
| ಗಂಡನ ಹೆಸರು | : | ಯಮನಪ್ಪ | ಚಾಸಾ-1 |
| ವರ್ಷ | : | 37 ವರ್ಷ | |
| ಉದ್ಯೋಗ | : | ಕೂಲಿ | |
| ವಿಳಾಸ | : | ಜಡ್ರಾಮಕುಂಟಿ | |

ದಿಃ 30.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ಯಮನಪ್ಪ ನನ್ನ ಗಂಡ. ನನ್ನ ಗಂಡನ ಸ್ವಂತ ಊರು ಬೆಣ್ಣೂರ ಗ್ರಾಮ. ಜಡ್ರಾಮಕುಂಟಿ ಮತ್ತು ಬೆಣ್ಣೂರ ಗ್ರಾಮಕ್ಕೆ ಅಂದಾಜು 8 ಕಿ.ಮೀ ಅಂತರ ಇರುತ್ತದೆ. ನನ್ನ ಗಂಡ ಬದುಕಿದ್ದಾಗ ನನ್ನ ತವರೂರಾದ ಜಡ್ರಾಮನಕುಂಟೆ ಗ್ರಾಮದಲ್ಲಿ ವಾಸವಾಗಿದ್ದನು. ಚಾಸಾ-22/ ಕೌಶಲ್ಯ ನನ್ನ ಮಗಳು.

2. ನನ್ನ ಗಂಡ ಯಮುನಪ್ಪನಿಗೆ ಮೂರು ಜನ ಸಹೋದರರು. ಅವರುಗಳೆಂದರೆ ಚಾಸಾ-21/ಅರ್ಜುನ, ವಿಠಲ ಹಾಗೂ ನ್ಯಾಯಾಲಯದ ಮುಂದಿರುವ 1 ನೇ ಆರೋಪಿ/ಬಸಪ್ಪ. ಚಾಸಾ-21 ಮತ್ತು ವಿಠ್ಠಲ ರವರು ಸಹ ಜಡ್ರಾಮಕುಂಟಿ ಗ್ರಾಮದಲ್ಲಿ ವಾಸವಾಗಿದ್ದರು. ವಿಠ್ಠಲ ಸುಮಾರು 11 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಚಾಸಾ-21/ಅರ್ಜುನ ಈಗ ಸುಮಾರು ಒಂದು ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನ್ಯಾಯಾಲಯದ ಮುಂದಿರುವ 2 ನೇ ಆರೋಪಿ/ ಹನಮಂತ 1 ನೇ ಆರೋಪಿಯ ಮಗ. ಆರೋಪಿತರು ಬೆಣ್ಣೂರ ಗ್ರಾಮದಲ್ಲಿ ವಾಸವಾಗಿರುತ್ತಾರೆ.

3. ನಮ್ಮ ಮನೆತನಕ್ಕೆ ಸುಮಾರು 5 ಎಕರೆ ಜಮೀನು ಬೆಣ್ಣೂರ ಗ್ರಾಮದಲ್ಲಿ ಇರುತ್ತದೆ. ನನ್ನ ಅತ್ತೆ-ಮಾವ ಮೃತಪಟ್ಟಿರುತ್ತಾರೆ. ನನ್ನ ಅತ್ತೆ-ಮಾವ ಮೃತಪಟ್ಟ ನಂತರ ನಮ್ಮ ಮನೆತನದ ಜಮೀನನ್ನು ಆರೋಪಿತರು ಸಾಗುವಳಿ ಮಾಡುತ್ತಿದ್ದರು. ನನ್ನ ಗಂಡನಿಗೆ ಮತ್ತು ಆತನ ಸಹೋದರರಾದ ಅರ್ಜುನ ಮತ್ತು ವಿಠಲ ರವರಿಗೆ ಆರೋಪಿತರು ಯಾವುದೆ ಭಾಗವನ್ನು

ಕೊಟ್ಟಿರುವುದಿಲ್ಲ. ಈ ಕಾರಣದಿಂದ ನಾವು ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೆವು. ಚಾಸಾ-18/ರೇಣವ್ವ ನನ್ನ ನಾದಿನಿ. ಚಾಸಾ-18 ರವರು ಸಹ ಜಡ್ರಾಮಕುಂಟಿಯಲ್ಲಿ ವಾಸವಾಗಿರುತ್ತಾರೆ. ಚಾಸಾ-16/ಯಮನಪ್ಪ ಚಾಸಾ-18 ರವರ ಮಗ.

4. ಈಗ ಅಂದಾಜು 3 ವರ್ಷಗಳ ಹಿಂದೆ ಚಾಸಾ-18 ರವರ ಒಬ್ಬ ಮಗ ಮೃತಪಟ್ಟಿದ್ದು, ಚಾಸಾ-18 ರವರನ್ನು ಮಾತನಾಡಿಸಲು ನಾನು ಮತ್ತು ನನ್ನ ಗಂಡ ಹೋಗಿದ್ದೆವು, ಅಲ್ಲಿಗೆ 1 ನೇ ಆರೋಪಿ ಸಹ ಬಂದಿದ್ದನು. ಆ ಸಮಯದಲ್ಲಿ ನನ್ನ ಗಂಡ ನಮ್ಮ ಮನೆತನಕ್ಕೆ ಸೇರಿದ ಜಮೀನಿನಲ್ಲಿ ವಿಠಲನ ಸಂಸಾರಕ್ಕೆ ಪಾಲು ಕೊಡುವಂತೆ 1 ನೇ ಆರೋಪಿಗೆ ಕೇಳಿದನು. ಅದಕ್ಕೆ 1 ನೇ ಆರೋಪಿ ನನ್ನ ಗಂಡನಿಗೆ ಬೈದಾಡಿದನು. ಆಗ ನನ್ನ ಗಂಡನಿಗೆ ಮತ್ತು 1 ನೇ ಆರೋಪಿ ಗಲಾಟೆ ಆಯಿತು. ನನ್ನ ನಾದಿನಿ ಚಾಸಾ-18 ರವರು ನನ್ನ ಗಂಡನಿಗೆ ಮತ್ತು 1 ನೇ ಆರೋಪಿಗೆ ಬೈದು ಕಳುಹಿಸಿರುತ್ತಾರೆ.

5. ಅದೇ ದಿನ ನನ್ನ ಗಂಡ ಮಧ್ಯಾಹ್ನ ಸುಮಾರು 4 ಗಂಟೆಗೆ ಚಾಸಾ-14 ರವರನ್ನು ಕರೆದುಕೊಂಡು ಮನೆತನದ ಜಮೀನಿನ ಭಾಗದ ವಿಚಾರವಾಗಿ ದ್ವಿಚಕ್ರ ವಾಹನದಲ್ಲಿ ಬೆಣ್ಣೂರ ಗ್ರಾಮದಲ್ಲಿರುವ ಆರೋಪಿತರ ಮನೆಗೆ ಹೋಗಿರುತ್ತಾರೆ. ನಂತರ ಸಂಜೆ 6 ಗಂಟೆಗೆ ಚಾಸಾ-16/ ಯಮನಪ್ಪ ನಮ್ಮ ಮನೆಗೆ ಬಂದು 1 ಮತ್ತು 2 ನೇ ಆರೋಪಿತರು ನನ್ನ ಗಂಡನಿಗೆ ಕೊಡಲಿ ಕಾವು ಮತ್ತು ಕಲ್ಲಿನಿಂದ ಹೊಡೆದಿರುತ್ತಾರೆ, ಆತನಿಗೆ ಎದ್ದೇಳಲು ಆಗುತ್ತಿಲ್ಲ ಎಂದು ಚಾಸಾ-14 ರವರು ಆತನಿಗೆ ತಿಳಿಸಿದ ಬಗ್ಗೆ ನನಗೆ ಹೇಳಿದನು. ವಿಷಯ ತಿಳಿದು ನಾನು ಮತ್ತು ಚಾಸಾ-16 ರವರು ಸೇರಿ ಚಾಸಾ-16 ರವರ ಬುಲೆರೋ ವಾಹನದಲ್ಲಿ ಬೆಣ್ಣೂರ ಗ್ರಾಮದಲ್ಲಿ ಆರೋಪಿತರ ಮನೆಯ ಬಳಿ ಹೋದಾಗ ನನ್ನ ಗಂಡ ಆರೋಪಿತರ ಮನೆ ಮುಂದೆ ಇರುವ ರಸ್ತೆಯಲ್ಲಿ ಬಿದ್ದಿದ್ದು, ಆತನ ತಲೆಗೆ ತೀವ್ರವಾದ ಪೆಟ್ಟಾಗಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಮತ್ತು ಪ್ರಜ್ಞೆ ತಪ್ಪಿತ್ತು. ನಂತರ ನನ್ನ ಗಂಡನನ್ನು ನಾನು ಮತ್ತು ಚಾಸಾ-16 ರವರು ಬಲೆರೋ ವಾಹನದಲ್ಲಿ ನಮ್ಮ ಮನೆಗೆ ಕರೆದುಕೊಂಡು ಬಂದೆವು. ನನ್ನ ಗಂಡನಿಗೆ ಪ್ರಜ್ಞೆ ಬಾರದೆ ಇದ್ದ ಕಾರಣದಿಂದ ಮರುದಿನ ಬೆಳಿಗ್ಗೆ ನಮ್ಮ ಗ್ರಾಮದ ಪಕ್ಕದಲ್ಲಿರುವ ಮುಡಪಲಜೀವಿ ಗ್ರಾಮದಲ್ಲಿದ್ದ ರಾಘವೇಂದ್ರ ಸರಾಫ/ಚಾಸಾ-20 ರವರನ್ನು ಕರೆಯಿಸಿದ್ದು, ಚಾಸಾ-20 ರವರು ನನ್ನ ಗಂಡನನ್ನು ಪರೀಕ್ಷಿಸಿ ಆತನಿಗೆ ಪ್ರಥಮ ಚಿಕಿತ್ಸೆ ಕೊಟ್ಟು ನನ್ನ ಗಂಡನಿಗೆ ತೀವ್ರವಾದ ಗಾಯಗಳಾಗಿರುತ್ತವೆ ತಕ್ಷಣವೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ಸದರಿ ದಿನ ರಾತ್ರಿ 8 ಗಂಟೆಗೆ ಚಾಸಾ-16 ರವರ ವಾಹನದಲ್ಲಿ ಬಾಗಲಕೋಟೆಯ ಕಟ್ಟಿ ಆಸ್ಪತ್ರೆಗೆ ನನ್ನ ಗಂಡನನ್ನು ಚಿಕಿತ್ಸೆಗಾಗಿ

ದಾಖಲಿಸಿರುತ್ತೇವೆ. ನಮಗೆ ತಕ್ಷಣವೆ ನನ್ನ ಗಂಡನನ್ನು ಆಸ್ಪತ್ರೆಗೆ ಸೇರಿಸಲು ಹಣ ಇಲ್ಲದೆ ಇದ್ದ ಕಾರಣದಿಂದ ನನ್ನ ಗಂಡನನ್ನು ಮನೆಗೆ ಕರೆದುಕೊಂಡು ಬಂದು, ಮರುದಿನ ಆಸ್ಪತ್ರೆಗೆ ಸೇರಿಸಿರುತ್ತೇವೆ.

6. ಇದಾದ ಮರುದಿನ ನಾನು ಪೊಲೀಸ ಠಾಣೆಗೆ ಭೇಟಿ ನೀಡಿ, ಚಾಸಾ-13 ರವರಿಂದ ದೂರನ್ನು ಬರೆಯಿಸಿ ಆರೋಪಿತರ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ. ಸಾಕ್ಷಿ ಸದರಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು. ದೂರು ನೀಡಿದ ಮರುದಿನ ನನ್ನ ಗಂಡ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ. ನಂತರ ಪೊಲೀಸರು ನನ್ನ ಗಂಡನ ಮೃತದೇಹದ ಮೇಲೆ ಶವಪಂಚನಾಮೆ ಜರುಗಿಸಿ, ಮರಣೋತ್ತರ ಪರೀಕ್ಷೆ ನಂತರ ನನ್ನ ಗಂಡನ ಮೃತದೇಹವನ್ನು ನಮಗೆ ಅಂತ್ಯಕ್ರಿಯೆಗಾಗಿ ಹಸ್ತಾಂತರ ಮಾಡಿರುತ್ತಾರೆ. ಈ ವಿಚಾರವಾಗಿ ಪೊಲೀಸರು ನನ್ನ ಮುಂದುವರೆದ ಹೇಳಿಕೆ ಪಡೆದುಕೊಂಡಿರುತ್ತಾರೆ.

7. ಇದಾದ 4-5 ದಿನಗಳ ನಂತರ ಪೊಲೀಸರು ನಮ್ಮ ಮನೆಗೆ ಬಂದಿದ್ದಾಗ ನನ್ನ ಗಂಡ ಘಟನಾ ಸಮಯದಲ್ಲಿ ಧರಿಸಿದ್ದ ನೀಲಿ ಬಣ್ಣದ ಶರ್ಟನ್ನು ಹಾಜರುಪಡಿಸಿರುತ್ತೇನೆ. ಅದನ್ನು ಪೊಲೀಸರು ಪಂಚರಾದ ಚಾಸಾ-3 ಮತ್ತು 4 ರವರ ಸಮಕ್ಷಮ ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿ ಸದರಿ ಶರ್ಟನ್ನು ನೋಡಿ ಗುರುತಿಸಿದ್ದು, ಅದನ್ನು ಮು ಮಾಲು-1 ಎಂದು ಗುರುತಿಸಲಾಯಿತು. ಇದಾದ ಒಂದು ವಾರದ ನಂತರ ನಾನು ಪೊಲೀಸ ಠಾಣೆಗೆ ಹೋಗಿ ನನ್ನ ಗಂಡನಿಗೆ ಸೇರಿದ ಮೊಬೈಲ ಪೋನ ಹಾಜರುಪಡಿಸಿರುತ್ತೇನೆ. ಅದನ್ನು ಪೊಲೀಸರು ಪಂಚರ ಸಮಕ್ಷಮ ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುತ್ತಾರೆ. ಸಾಕ್ಷಿ ಸದರಿ ಜೀಯೋ ಕಂಪನಿ ಮೊಬೈಲ ಪೋನ ನೋಡಿ ಗುರುತಿಸಿದ್ದು, ಅದನ್ನು ಮು ಮಾಲು-2 ಎಂದು ಗುರುತಿಸಲಾಯಿತು. ಸಾಕ್ಷಿ ಜಪ್ತಿ ಪಂಚನಾಮೆಯಲ್ಲಿರುವ ತಮ್ಮ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಸದರಿ ಜಪ್ತಿ ಪಂಚನಾಮೆಯನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು. ಅದೇ ಕಾಲಕ್ಕೆ ಒಂದು ಭಾವಚಿತ್ರ ತೆಗೆಯಲಾಯಿತು. ಸದರಿ ಭಾವಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು. ನನ್ನ ಗಂಡನಿಗೆ ಆರೋಪಿತರು ಕೊಡಲಿ ಕಾವು ಮತ್ತು ಕಲ್ಲಿನಿಂದ ಹಲ್ಲೆ ಮಾಡಿದ್ದರಿಂದ ನನ್ನ ಗಂಡ ಮೃತಪಟ್ಟಿರುತ್ತಾನೆ.

**ಪಾಟೀ ಸವಾಲುಃ ಶ್ರೀ. ವಿ ಎಸ್ ಎಂ ವಕೀಲರಿಂದ** ಆರೋಪಿತರ ಪರ

ನನಗೆ ಮೂರು ಜನ ಮಕ್ಕಳು. ಅವರುಗಳಲ್ಲಿ ಇಬ್ಬರು ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ. ನಮ್ಮ ಮನೆಯಲ್ಲಿ ನಾನು ಮತ್ತು ನಮ್ಮ ಮಕ್ಕಳು ಮಾತ್ರ ವಾಸವಾಗಿರುತ್ತೇವೆ. ನನ್ನ ಗಂಡ ಜೀವಂತವಾಗಿದ್ದಾಗ ಕೂಲಿ ಕೆಲಸ ಮಾಡುತ್ತಿದ್ದನು. ನಮ್ಮ ಮನೆತನದ ಜಮೀನು ಬೆಣ್ಣೂರ ಗ್ರಾಮದಲ್ಲಿರುವ ನಮ್ಮ ಮನೆತನದ ಜಮೀನು ನನ್ನ ಮಾವ/ಮಾಯಪ್ಪ ಹಾಗೂ ಆತನ ಸಹೋದರಿಯರ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನಿನಲ್ಲಿ ಮಾವಿನ ಮರಗಳು ಇರುತ್ತವೆ. ಸದರಿ ಜಮೀನು ಮುಳುಗಡೆಯಾಗಿರುತ್ತದೆ ಎಂದು ನೋಟಿಸು ಬಂದಿರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಬಂದ ಮಾವಿನ ಫಸಲನ್ನು ನಾವೆಲ್ಲರೂ ಒಟ್ಟಾಗಿ ತೆಗೆದುಕೊಳ್ಳುತ್ತಿದ್ದೆವು ಎಂದರೆ ಸಾಕ್ಷಿ ಆರೋಪಿತರು ತೆಗೆದುಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

2. ನಮ್ಮ ಊರಿನಿಂದ ಬೆಣ್ಣೂರ ಗ್ರಾಮಕ್ಕೆ 8 ಕಿ.ಮೀ ಅಂತರ ಇರುತ್ತದೆ. ಘಟನೆ ಆದ ಎರಡು ದಿನಗಳ ನಂತರ ನಾನು ಆರೋಪಿತರ ವಿರುದ್ಧ ದೂರನ್ನು ದಾಖಲಿಸಿರುತ್ತೇನೆ. ನನ್ನ ಗಂಡನನ್ನು ಬೆಣ್ಣೂರು ಗ್ರಾಮದಿಂದ ಕರೆದುಕೊಂಡು ಬರಲು ನಾನು, ಚಾಸಾ-15/ಮಂಜಪ್ಪ ಮತ್ತು ಚಾಸಾ-16/ಯಮನಪ್ಪ ರವರು ಹೋಗಿರುತ್ತೇವೆ. ಆರೋಪಿತರ ಮನೆಯ ಅಕ್ಕಪಕ್ಕದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ನಾವು ಸುಮಾರು ಸಂಜೆ 6 ಗಂಟೆಗೆ ಆರೋಪಿತರ ಮನೆಯ ಬಳಿ ನನ್ನ ಗಂಡನನ್ನು ಕರೆದುಕೊಂಡು ಬರಲು ಹೋಗಿದ್ದೆವು. ಆ ಸಮಯದಲ್ಲಿ ನನ್ನ ಗಂಡನ ಅಕ್ಕಪಕ್ಕದಲ್ಲಿ ಚಾಸಾ-14 ಒಬ್ಬನೆ ಇದ್ದನು ಮತ್ತು ಸದರಿ ಊರಿನವರು ಯಾರೂ ಅಕ್ಕಪಕ್ಕದಲ್ಲಿ ಇರಲಿಲ್ಲ. ನನ್ನ ಗಂಡನನ್ನು ನಾವು ಕರೆದುಕೊಂಡು ಬರಲು ಬೆಣ್ಣೂರ ಗ್ರಾಮಕ್ಕೆ ಹೋಗಿದ್ದಾಗ ನನ್ನ ಗಂಡನಿಗೆ ಪ್ರಜ್ಞೆ ಇರಲಿಲ್ಲ. ನನ್ನ ಗಂಡನನ್ನು ತಕ್ಷಣವೆ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎಂದು ನನಗೆ ಗೊತ್ತಾಗಿರುವುದಿಲ್ಲ. ನಮ್ಮ ಮನೆಗೆ ನನ್ನ ಗಂಡನನ್ನು ಕರೆದುಕೊಂಡು ಬಂದು ಆಸ್ಪತ್ರೆಗೆ ಸೇರಿಸುವ ವರೆಗೂ ಆತನಿಗೆ ಪ್ರಜ್ಞೆ ಇರಲಿಲ್ಲ. ಚಾಸಾ-20 ನಮ್ಮ ಊರಿಗೆ ಬಂದಿರುತ್ತಾರೆ ಎಂದು ತಿಳಿದು ನಾನೇ ಆತನನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ನನ್ನ ಗಂಡನನ್ನು ಪರೀಕ್ಷಿಸಲು ತಿಳಿಸಿರುತ್ತೇನೆ. ಚಾಸಾ-20 ನಮ್ಮ ಮನೆಗೆ ಬಂದು ನನ್ನ ಗಂಡನನ್ನು ಪರೀಕ್ಷಿಸಿದ ನಂತರ ಯಾವುದೇ ಬ್ಯಾಂಡೇಜ್ ಕಟ್ಟಿರುವುದಿಲ್ಲ. ನನ್ನ ಗಂಡನನ್ನು ಆಸ್ಪತ್ರೆಗೆ ದಾಖಲಿಸಿದ ಮರುದಿನ ಆತ ಮೃತಪಟ್ಟಿರುತ್ತಾನೆ. ನಿಶಾನೆ ಪಿ-1 ದೂರನ್ನು ಚಾಸಾ-13 ರವರು ನಾನು ಹೇಳಿದಂತೆ ಠಾಣೆಯಲ್ಲಿ ಬರೆದಿರುತ್ತಾರೆ. ನಿಪಿ-1 ದೂರಿನಲ್ಲಿ ನನ್ನ ಬಳಿ ಹಣ ಇಲ್ಲದೆ ಇದ್ದ ಕಾರಣದಿಂದ ನನ್ನ ಗಂಡನನ್ನು ತಕ್ಷಣವೆ ಆಸ್ಪತ್ರೆಗೆ ಸೇರಿಸಲು ಆಗಿರುವುದಿಲ್ಲ ಎಂದು ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ದೂರನ್ನು ತಕ್ಷಣವೆ ಕೊಡಬೇಕು ಎಂದು ನನಗೆ ಗೊತ್ತಾಗದೆ ಇರುವುದರಿಂದ ತಕ್ಷಣವೆ ದೂರನ್ನು ಕೊಟ್ಟಿರುವುದಿಲ್ಲ.

3. ಚಾಸಾ-3 ಮತ್ತು 4 ರವರು ನನ್ನ ಸಂಬಂಧಿಕರು ಎಂದರೆ ಸರಿ. ಚಾಸಾ-5 ರವರು ನಮ್ಮ ಊರಿನವರು ಎಂದರೆ ಸರಿ. ದೂರು ದಾಖಲಿಸಿದ ನಂತರ ಪೊಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನನ್ನ ಗಂಡನಿಗೆ ಸೇರಿದ ಶರ್ಟ ಮತ್ತು ಮೊಬೈಲ ಪೋನನ್ನು ಪೊಲೀಸರ ಮುಂದೆ ಬೇರೆ ಬೇರೆ ದಿನ ಹಾಜರುಪಡಿಸಿರುತ್ತೇನೆ. ಪೊಲೀಸರು ಪಂಚನಾಮೆ ಮೇಲೆ ನನ್ನ ಹೆಬ್ಬಟ್ಟಿನ ಗುರುತು ಪಡೆದುಕೊಂಡಿರುತ್ತಾರೆ. ನಿಪಿ-2 ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

4. ನನ್ನ ಗಂಡನಿಗ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿ. ನನ್ನ ಗಂಡ ಮದ್ಯಪಾನ ಮಾಡಿ ತಾನಾಗಿಯೆ ನಮ್ಮ ಊರಿನಲ್ಲಿ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ನನ್ನ ಗಂಡ ಮದ್ಯಪಾನ ಮಾಡಿ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡು ಮೃತಪಟ್ಟಿದ್ದನ್ನು ಉಪಯೋಗಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

5. ನನ್ನ ಗಂಡ ಮತ್ತು ಚಾಸಾ-14 ರವರು ಬೆಣ್ಣೂರ ಗ್ರಾಮಕ್ಕೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನ್ನ ಗಂಡನಿಗೆ ಯಾವುದೇ ಕಲ್ಲು ಮತ್ತು ಕೊಡಲಿ ಕಾವುನಿಂದ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-15 ಮತ್ತು 16 ರವರು ಬೆಣ್ಣೂರ ಗ್ರಾಮದಲ್ಲಿರುವ ಆರೋಪಿತರ ಮನೆ ಬಳಿ ಹೋಗಿರುವುದಿಲ್ಲ ಮತ್ತು ಗಾಯಗೊಂಡಿದ್ದ ನನ್ನ ಗಂಡನನ್ನು ಕರೆದುಕೊಂಡು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಸೇರಿದ ಶರ್ಟ ಮತ್ತು ಮೊಬೈಲ ಪೋನನ್ನು ಪೊಲೀಸರ ಮುಂದೆ ಹಾಜರುಪಡಿಸಿರುವುದಿಲ್ಲ ಮತ್ತು ಪೊಲೀಸರು ಅದನ್ನು ಪಂಚನಾಮೆ ಅಡಿಯಲ್ಲಿ ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ಆರೋಪಿತರಿಗೂ ಆಸ್ತಿ ವಿಚಾರವಾಗಿ ತಕರಾರು ಇದ್ದು, ನನ್ನ ಗಂಡನ ಸಾವನ್ನು ಉಪಯೋಗಿಸಿಕೊಂಡು ಅವರ ವಿರುದ್ಧ ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .